ಉ) ಉದ್ಭವಿಸುವುದಿಲ್ಲ.

ಊ) ಸಮಸ್ಯೆಯ ಶಾಶ್ವತ ಪರಿಹಾರಕ್ಕಾಗಿ ನಗರದ ವಿತರಣಾ ವ್ಯವಸ್ಥೆಯ ನವೀಕರಣ ಹಾಗೂ ಹಾಲಿ ಇರುವ ಸಗಟು ನೀರು ಸರಬರಾಜು ಸಾಮರ್ಥ್ಯವನ್ನು ಹೆಚ್ಚಿಸಲು ಅವಶ್ಯವಿರುವ ಕಾಮಗಾರಿಗಳನ್ನು ಕೈಗೊಳ್ಳಲು ಅವಶ್ಯವಿರುವ ವಿನ್ಯಾಸಗಳನ್ನು ಹಾಗೂ ಅಂದಾಜನ್ನು ತಯಾರಿಸಲಾಗುತ್ತಿದೆ. ಈ ಯೋಜನೆಯನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎ.ಡಿ.ಬಿ) ನೆರವಿನೊಂದಿಗೆ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

680(1141) ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಿಜಾಪುರ ನಗರದಲ್ಲಿ ಐತಿಹಾಸಿಕ ಪ್ರಾಚೀನ ಸ್ಮಾರಕವಾದ 'ತಾಸ್‌ಬವಡೆ' ಪ್ರದೇಶವನ್ನು ಅತಿಕ್ರಮಣಕಾರರು ಅತಿಕ್ರಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅತಿಕ್ರಮಿಸಿಕೊಳ್ಳಲಾಗಿರುವ ಪ್ರದೇಶವೆಷ್ಟು; ಯಾವಾಗ ಅತಿಕ್ರಮಿಸಿಕೊಂಡಿರುತ್ತಾರೆ;

ಇ) ಆ ಅತಿಕ್ರಮಣಕಾರರು ಯಾರು ಯಾರು; ಅವರ ವಿರುದ್ಧ ಯಾವ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ;

ಈ) ಎಷ್ಟು ಅತಿಕ್ರಮಣದ ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾಗಿದೆ ಹಾಗೂ ಎಷ್ಟು ಪ್ರಕರಣಗಳು ಇತ್ಯರ್ಥಗೊಂಡಿದೆ;

ಉ) ಅತಿಕ್ರಮಣಕಾರರನ್ನು ತೆರವುಗೊಳಿಸಲು ಸರ್ಕಾರದ ವಿಫಲತೆಗೆ ಕಾರಣಗಳೇನು;

ಊ) ಅತಿಕ್ರಮಣಕಾರರು ಅತಿಕ್ರಮಣ ಮಾಡದಂತೆ 'ತಾಸ್‌ಬವಡೆ' ಸ್ಮಾರಕವನ್ನು ಸಂರಕ್ಷಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಹೌದು.

ಆ) 12000 ಚದರ ಅಡಿ. ಕಳೆದ ಮೂರು ವರ್ಷಗಳ ಹಿಂದಿನಿಂದ ಅತಿಕ್ರಮಿಸಿಕೊಂಡಿರುತ್ತಾರೆ.

ಇ) ಡಾ॥ ಮೆಹಬೂಬ ಕಲ್ಬರ್ಗಿ ಮತ್ತು ಇತರರು. ಅಂಶ (ಉ) ನಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ವಿವಿಧ ನ್ಯಾಯಾಲಯಗಳಲ್ಲಿ 30 ಪ್ರಕರಣಗಳನ್ನು ದಾಖಲು ಮಾಡಲಾಗಿದೆ.

ಉ) ಅತಿಕ್ರಮಣ ತೆರವುಗೊಳಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣೆಯು, ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ನಿವೇಶಗಳ ಅವಶೇಷಗಳು ಅಧಿನಿಯಮ 1958 ಮತ್ತು ನಿಯಮಗಳು 1959ರ ಸೆಕ್ಷನ್ 38ರಡಿಯಲ್ಲಿ ಅಗತ್ಯ ಕ್ರಮಗಳನ್ನು ಸೂಕ್ತ ಹಂತದಲ್ಲಿ ಕೈಗೊಳ್ಳಲಾಗುತ್ತಿದೆ.

ಊ) ಅತಿಕ್ರಮಣದಿಂದ ತಾಸಬಾವಡಿ ಸ್ಮಾರಕವನ್ನು ಸಂರಕ್ಷಿಸಿ ಈ ಸ್ಮಾರಕದ ಸುತ್ತಲೂ ಚೈನ್ ಲಿಂಕ್ ಬೇಲಿ ಹಾಕುವ ಮತ್ತು ಲ್ಯಾಂಡ್ ಸ್ಕೇಪಿಂಗ್ ಮಾಡುವ ಸಲುವಾಗಿ ಪ್ರಾಚ್ಯವಸ್ತು. ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು 12ನೇ ಆರ್ಥಿಕ ಅನುದಾನದ ಅಡಿಯ ಕಾರ್ಯಕ್ರಮದಲ್ಲಿ ಸುಮಾರು 10.00 ಲಕ್ಷ ರೂ.ಗಳನ್ನು 2006–07ನೇ ಸಾಲಿನಲ್ಲಿ ಮೀಸಲಿಟ್ಟಿದೆ.

681(1162) ಶ್ರೀ ಬಸವಣ್ಣೆಪ್ಪ ಜೆ. (ಹೊಳೆಹೊನ್ನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ಈಗ ಖಾಲಿ ಇರುವ ಸದಸ್ಯರುಗಳ ಸಂಖ್ಯೆ ಎಷ್ಟು;

ಆ) ಈ ಸ್ಥಾನಗಳು ಯಾವಾಗಿನಿಂದ ಖಾಲಿಯಾಗಿವೆ (ದಿನಾಂಕವಾರು ತಿಳಿಸುವುದು);

ಇ) ಖಾಲಿ ಇರುವ ಸ್ಥಾನಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

ಈ) ಈ ಸ್ಥಾನಗಳನ್ನು ಖಾಲಿ ಇಟ್ಟಿರುವುದರಿಂದ ಲೋಕ ಸೇವಾ ಆಯೋಗದ ಕಾರ್ಯನಿರ್ವಹಣೆಗೆ ತೊಂದರೆಯಾಗಿದೆಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) 4.

ಆ) 4–3–2004, 5–10–2005, 24–4–2006 ಮತ್ತು 19–5–2006.

ಇ) ಸದ್ಯದಲ್ಲಿಯೇ.

ಈ) ಇಲ್ಲ.

682(815) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) : ಮಾನ್ಯ ಪ್ರವಾಸೋದ್ಯಮ, ಜವಳಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿ ಪ್ರಾರಂಭವಾಗಿದೆಯೇ;

ಆ) ಪ್ರಾರಂಭವಾಗಿದ್ದಲ್ಲಿ ಈವರೆಗಿನ ಪ್ರಗತಿಯ ಬಗ್ಗೆ ವಿವರ ಒದಗಿಸುವುದು;